ಆರೂರು ರವಿ ಸ್ಮಾರಕ ಸರ್ಕಾರಿ ಪ್ರೌಢಶಾಲೆ ಬಪ್ಪಂಜಿ. ಕೊಪ್ಪ ತಾ.

# ಹತ್ತನೆಯ ತರಗತಿ ಅಲಂಕಾರಗಳ ಪಟ್ಟಿ

---

೧. ಹಸುಳೆಯಂದದಿ ಒಲಿದಳು - **ಉಪಮಾಲಂಕಾರ**

೨. ದುರ್ಯೋಧನನು ಅರಗಿನ ಮನೆ ಕಟ್ಟಿದಂತೆ - **ಉಪಮಾಲಂಕಾರ**

೩. ಬಳಾರಿಯ ಮನೆಯಂ ಪರಕೆಯ ಕುರಿ ಪುಗಿಸುವಂತೆ - **ಉಪಮಾಲಂಕಾರ**

೪. ಪುಣ್ಯದೊಂದು ಪೆರ್ಮರನುಳಿವಂತೆ  ನೀನುಳಿದೆ. - **ಉಪಮಾಲಂಕಾರ**

೫. ಒಳಗಿನ ಮಂದಿ ಗುಂಡು ಹೊಡೆದರೊ ಮುಂಗಾರಿ ಸಿಡಿಲ ಸಿಡಿದ್ಹಂಗ - **ಉಪಮಾಲಂಕಾರ**

೬. ಸತಿಪತಿಗಳೊಂದಾಗದವನ ಭಕ್ತಿ ಅಮೃತದೊಳು  ವಿಷ ಬೆರೆದಂತೆ - **ಉಪಮಾಲಂಕಾರ**

೭. ಮರನೇರಿದ ಮರ್ಕಟನಂತೆ - **ಉಪಮಾಲಂಕಾರ**

೮. ಅಂದಣವನೇರಿದ ಸೊಣಗನಂತೆ - **ಉಪಮಾಲಂಕಾರ**

೯. ನುಡಿದರೆ ಮುತ್ತಿನ ಹಾರದಂತಿರಬೇಕು - **ಉಪಮಾಲಂಕಾರ**

೧೦. ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು - **ಉಪಮಾಲಂಕಾರ**

೧೧. ನುಡಿದರೆ ಸ್ಪಟಿಕದ ಶಲಾಕೆಯಂತಿರಬೇಕು - **ಉಪಮಾಲಂಕಾರ**

೧೨. ಶೋಕದುಲ್ಕೆ .- **ರೂಪಕಾಲಂಕಾರ**

೧೩. ಆತ್ಮ ಸುರಭಿ .- **ರೂಪಕಾಲಂಕಾರ**

೧೪. ಸಿಡಿಲ ಸಿಡಿದ್ಹಾಂಗ ಗುಂಡು ಸುರಿದಾವ. - **ಉಪಮಾಲಂಕಾರ**

೧೫. ಮಾರಿಗೌತಣವಾಯ್ತು ನಾಳಿನ ಭಾರತವು. - **ರೂಪಕಾಲಂಕಾರ**

೧೬. ಕಾದಾಟದಾಟ. - **ರೂಪಕಾಲಂಕಾರ**

೧೭. ಬೆಕ್ಕಿನಂತೆ ದೇಹವನ್ನು ಹುದುಗಿಸಿಕೊಂಡು ಹುಲಿ. - **ಉಪಮಾಲಂಕಾರ**

೧೮.ವದನಾರವಿಂದ . - **ರೂಪಕಾಲಂಕಾರ**

೧೯. ಮಾತು ಬಲ್ಲವನಿಗೆ ಜಗಳವಿಲ್ಲ ; ಊಟ ಬಲ್ಲವನಿಗೆ ರೋಗವಿಲ್ಲ. - **ದೃಷ್ಟಾಂತಾಲಂಕಾರ**

೨೦. ಅಬ್ಬೋದ ಸರೋವರವು ತ್ರೈಲೋಕ್ಯ ಲಕ್ಷ್ಮಿಯು ತನ್ನ ಸೌಂದರ್ಯವನ್ನು ನೋಡಲು ಮಾಡಿಟ್ಟ ರನ್ನಗನ್ನಡಿಯೋ ಎಂಬಂತೆ ಶೋಭಿಸಿತು. - **ಉತ್ಪ್ರೇಕ್ಷಾಲಂಕಾರ**

೨೧. ನೀಚರಿಗೆ ಮಾಡಿದ ಉಪಕಾರವು ಹಾವಿಗೆ ಹಾಲೆರೆದಂತೆ. - **ಉಪಮಾಲಂಕಾರ**

೨೨. ಭೀಮ ದುರ್ಯೋಧನರು ಮದಗಜಗಳಂತೆ ಹೋರಾಡಿದರು. - **ಉಪಮಾಲಂಕಾರ**

೨೩.ಅಳ್ಳಿರಿಯುತಿಪ್ಪ ಎಮ್ಮ ಒಡಲಬೇಗೆಯ ಬೆಂಕಿಯುರಿ ನಿನ್ನನಿರಿಯದೆ ಪೇಳು ವಿಶ್ವಾಮಿತ್ರ. - **ರೂಪಕಾಲಂಕಾರ**